## ಶ್ರೇಷ್ಠ ಯುವ ಕೃಷಿಕ



**ಹೆಸರು :** ರಾಜು ಸುರೇಶ ತಳವಾರ
**ಸಾ :** ಕಾಂತ್ರಾಜಿ
**ತಾಲ್ಲೂಕು :** ಬನವಾಸಿ
**ಜಿಲ್ಲೆ :** ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ :** 9741579274

**ವಿಶೇಷ ಸಾಧನೆಗಳು**

- ಕೂಲಿ ಕೆಲಸದಿಂದ ಉತ್ತಮ ಕೃಷಿಕ.
- ಒಟ್ಟು ಕೃಷಿ ಪ್ರದೇಶ 7.51 ಎಕರೆಗಳಿದ್ದು ಇದರಲ್ಲಿ 4.31 ಎಕರೆ ಸ್ವಂತದ್ದು ಹಾಗೂ 3.20 ಎಕರೆ ಗುತ್ತಿಗೆ ಆಧಾರದ್ದಾಗಿದೆ. ಜಮೀನಿನಲ್ಲಿ ಭತ್ತ, ಮುಸುಕಿನ ಜೋಳ, ಅಲಸಂದೆ, ಹೆಸರುಕಾಳು, ಉದ್ದಿನಕಾಳು, ಬೆಂಡೆ, ಶುಂಠಿ, ಮೆಣಸು, ತಿಂಗಳ ಹುರುಳಿ, ಮತ್ತು ಅರಿಶಿಣ ಬೆಳೆಗಳಂತಹ ವಿವಿಧ ಬೆಳೆಗಳನ್ನು ಬೆಳೆಯುವುದರಲ್ಲಿ ಯಶಸ್ವಿ ಆಗಿದ್ದಾರೆ.
- 150 ಕ್ವಿಂಟಾಲ್ ಭತ್ತ, 70 ಕ್ವಿಂಟಾಲ್ಮುಸುಕಿನ ಜೋಳ, 2 ಕ್ವಿಂಟಾಲ್ ಅಲಸಂದೆ, 3 ಕ್ವಿಂಟಾಲ್ ಹೆಸರುಕಾಳು, 2.5 ಕ್ವಿಂಟಾಲ್ ಉದ್ದು, 35 ಕ್ವಿಂಟಾಲ್ ಬೆಂಡೆ, 42 ಕ್ವಿಂಟಾಲ್ ಶುಂಠಿ, 4 ಕ್ವಿಂಟಾಲ್ ಮೆಣಸು, 1 ಕ್ವಿಂಟಾಲ್ ತಿಂಗಳ ಹುರುಳಿ, 6 ಕ್ವಿಂಟಾಲ್ ಅರಿಶಿಣವನ್ನು ಬೆಳೆದು ಎಲ್ಲರೂ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದ್ದಾರೆ.
- ಕೃಷಿಯ ಪೂರಕ ಕಸುಬಾಗಿ ಹೈನುಗಾರಿಕೆ ಮಾಡಿ ದಿನಾಲೂ 14 ಲೀಟರ್ ಹಾಲು ಉತ್ಪಾದನೆ ಮಾಡುತ್ತಿದ್ದಾರೆ.
- ಬಿಡುವಿನ ವೇಳೆಯಲ್ಲಿ ವಿವಿಧ ಕೃಷಿ ಉಪಕರಣ / ಯಂತ್ರಗಳಿಂದ ಪ್ರತಿ ವರ್ಷ 70,000 ದಿಂದ 80,000 ಆದಾಯ ಗಳಿಸುತ್ತಿದ್ದಾರೆ.
- ಕೃಷಿಯಿಂದ ಒಟ್ಟು ಆದಾಯ ರೂ. 7,26,520 ಖರ್ಚು 1,63,700 ನಿವ್ವಳ ಆದಾಯ 5,62,800.
- ನೀರಿನ ಸಂಧಿಗ್ದ ಬಳಕೆಗೆ ಕೃಷಿ ಹೊಂಡ ನಿರ್ಮಾಣ ಮಾಡಿದ್ದಾರೆ.
- ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸುಧಾರಣೆ ಮಾಡಿದ್ದಾರೆ.
- ಬೇರೆ ರೈತರಿಗೆ ಮಾರ್ಗದರ್ಶಕನಾಗಿ ಸಮಾಜಸೇವೆ ಮಾಡುತ್ತಿದ್ದಾರೆ.
- 2013–14 ನೇ ಸಾಲಿನಲ್ಲಿ ಭತ್ತದ ಬೆಳೆ ಸ್ಪರ್ಧೆಯಲ್ಲಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.







# ಶ್ರೇಷ್ಠ ಯುವ ಕೃಷಿ ಮಹಿಳೆ



**ಹೆಸರು** : ಸವಿತಾ ಭದ್ರಗೌಡ ಕರಡೇರಮನಿ
**ಸಾ** : ಸಂತೊಳ್ಳಿ
**ತಾಲ್ಲೂಕು** : ಶಿರಸಿ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 9901588138

**ವಿಶೇಷ ಸಾಧನೆಗಳು**

- ಹೊಂದಿರುವ ಜಮೀನು 5 ಎಕರೆ, ಇದರಲ್ಲಿ 2 ಎಕರೆಯಲ್ಲಿ ಅಡಿಕೆ ಆಧಾರಿತ ಬಹು ಅಂತಸ್ತು ಬೆಳೆ ಪದ್ದತಿ ಅಳವಡಿಕೆ ಇನ್ನುಳಿದ 3 ಎಕರೆಯಲ್ಲಿ ಬಹು ಬೆಳೆ ಪದ್ದತಿಯಲ್ಲಿ ಭತ್ತ, ಕಬ್ಬು, ಮುಸುಕಿನ ಜೋಳ, ಹುರುಳಿ, ಉದ್ದು, ಹೆಸರ ನ್ನು ಬೆಳೆದಿದ್ದಾರೆ.
- ಭತ್ತದಲ್ಲಿ ಯಾಂತ್ರೀಕೃತ ನಾಟಿ ಪದ್ದತಿಯ ಅಳವಡಿಕೆ.
- ಹೈನುಗಾರಿಕೆಯಲ್ಲಿ 2 ಸ್ವದೇಶಿ ಆಕಳು, 1 ಮಿಶ್ರತಳಿ ಆಕಳು, 2 ಎಮ್ಮೆ , 2 ಹೂಡುವ ದನಗಳು, 1 ಕೋಣ ಹಾಗೂ 2 ಕುರಿಗಳನ್ನು ಸಾಕಿ ವೈವಿಧ್ಯತೆಯನ್ನು ಕಾಪಾಡಿದ್ದಾರೆ.
- ಅಡಿಕೆ + ತೆಂಗು + ಕರಿಮೆಣಸು + ಏಲಕ್ಕಿ ಬೆಳೆದು ಬಹು ಅಂತಸ್ತು ಬೆಳೆ ಪದ್ದತಿ ಅಳವಡಿಸಿ ಅಧಿಕ ಆದಾಯವನ್ನು ಗಳಿಸಿದ್ಧಾರೆ.
- ಕೃಷಿಗೆ ಪೂರಕವಾದ ಜೇನು ಸಾಕಣಿಕೆಯನ್ನು ಮಾಡಿದ್ದಾರೆ.
- ಕೃಷಿ ಚಟುವಟಿಕೆಯ ಎಲ್ಲಾ ಮೂಲಗಳಿಂದ ಒಟ್ಟು 10,60,000 ರೂ ಆದಾಯ ಗಳಿಸುತ್ತಿದ್ದಾರೆ.






## ಶ್ರೇಷ್ಠ ಯುವ ಕೃಷಿಕ



**ಹೆಸರು** : ರಾಘವೇಂದ್ರ ಅನಂತ ಭಟ್
**ಸಾ** : ಕೋಗಿಲಬನ (ದಾಂಡೇಲಿ)_ 581325
**ತಾಲ್ಲೂಕು** : ಹಳಿಯಾಳ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 9480311861/ 9480538609

**ವಿಶೇಷ ಸಾಧನೆಗಳು**

- ಒಟ್ಟು 11 ಎಕರೆ ಕೃಷಿ ಭೂಮಿಯನ್ನು ಹೊಂದಿದ್ದು, ಮೂರು ಸ್ವದೇಶಿ ಆಕಳು ಹಾಗೂ ನಾಲ್ಕು ಎಮ್ಮೆಯನ್ನು ಸಾಕಿದ್ದಾರೆ.
- ಮಣ್ಣು ಮತ್ತು ನೀರು ಸಂರಕ್ಷಣಾ ವಿಧಾನಗಳನ್ನು ಅಳವಡಿಸಿದ್ದು ಮೇವಿನ ಬೆಳೆಗಳಾದ ನೇಪಿಯರ್, ಗಿನಿ ಹುಲ್ಲಿನಿಂದ ಜೈವಿಕ ಬದುವನ್ನು ನಿರ್ಮಿಸಿದ್ದಾರೆ. ಅಲ್ಲದೇ ಕೃಷಿ ಹೊಂಡವನ್ನು ನಿರ್ಮಿಸಿದ್ದಾರೆ.
- ಇವರು ಏಕಬೆಳೆ ಪದ್ದತಿಯಲ್ಲಿ ಕಬ್ಬು, ಗೋವಿನಜೋಳ, ಭತ್ತ, ದ್ವಿದಳ ಧಾನ್ಯ ಮತ್ತು ಅಡಿಕೆ ಆಧಾರಿತ ಬಹುಬೆಳೆ ಪದ್ಧತಿಯಲ್ಲಿ ಬಾಳೆ, ತೆಂಗು, ಏಲಕ್ಕಿ, ಲವಂಗ, ಕಾಳುಮೆಣಸು, ವೆನಿಲ್ಲಾ, ಮತ್ತಿತರ ಬೆಳೆಯನ್ನು ಬೆಳೆಯುತ್ತಿದ್ದಾರೆ.
- ಮಣ್ಣಿನ ಫಲವತ್ತತೆ ಹೆಚ್ಚಿಸಲು ಕೊಟ್ಟಿಗೆ ಗೊಬ್ಬರ, ಜೈವಿಕ ಗೊಬ್ಬರಗಳಾದ ರೈಜೋಬಿಯಂ, ರಂಜಕ ಕರಗಿಸುವ ಜೀವಾಣು ಗೊಬ್ಬರವನ್ನು ಬಳಸುತ್ತಿದ್ದಾರೆ. ಇವರಲ್ಲಿ ಜೈವಿಕ ಅನಿಲ ಘಟಕವೂ ಇದೆ.
- ಒಟ್ಟಾರೆ ಇವರ ವಾರ್ಷಿಕ ಆದಾಯ ರೂ.11,50,000/–
- ಹೆಚ್ಚಿನ ಶ್ರಮ ವಹಿಸಿದ್ದು ನವಗ್ರಹ ವನ, ನಕ್ಷತ್ರವನಗಳಿಗೆ ಸಂಭಂದಪಟ್ಟ ಸಸ್ಯ ಪ್ರಬೇದಗಳನ್ನು ಬೆಳೆಸುವ ಪ್ರಯತ್ನವನ್ನು ಕೂಡಾ ಮಾಡಿತ್ತಿದ್ದಾರೆ.





# ಶ್ರೇಷ್ಠ ಯುವ ಕೃಷಿ ಮಹಿಳೆ

**ಹೆಸರು** : ಮಂಗಲಾ ಆನಂದ ಪಾಟೀಲ್
**ಸಾ** : ಬಿದ್ರೊಳ್ಳಿ, ಯಡೋಗಾ
**ತಾಲ್ಲೂಕು** : ಹಳಿಯಾಳ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 7829089078



**ವಿಶೇಷ ಸಾಧನೆಗಳು**

- ತಮ್ಮ 6 ಎಕರೆ 20 ಗುಂಟೆ ಕ್ಷೇತ್ರದಲ್ಲಿ ಕೃಷಿ ಬೆಳೆಗಳಾದ ಕಬ್ಬು, ಗೋವಿನಜೋಳ, ಹತ್ತಿ, ಭತ್ತ, ಹಾಗೂ ತೋಟಗಾರಿಕೆ ಬೆಳೆಗಳಾದ ಮಾವು, ಚಿಕ್ಕು, ಗೋಡಂಬಿ, ತೆಂಗು ಹಾಗೂ ಪೇರಲ ಗಿಡವನ್ನು ಹೊಂದಿದ್ದಾರೆ. ಅಲ್ಲದೇ ಸುತ್ತಲೂ ಅಕೇಶಿಯಾ, ಸಾಗುವಾನಿ ಮರಗಳನ್ನು ಬೆಳೆಸಿದ್ದಾರೆ.
- ಮಣ್ಣಿನ ಫಲವತ್ತತೆ ಹೆಚ್ಚಿಸಲು ಭತ್ತದಲ್ಲಿ ಬದುಗಳ ಮೇಲೆ ಅಲಸಂದಿ, ತೊಗರಿ, ಇನ್ನಿತರ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದಾರೆ. ಅಲ್ಲದೇ ಕಬ್ಬನ್ನು ಜೋಡು ಸಾಲು ಪದ್ಧತಿಯಲ್ಲಿ ನಾಟಿ ಮಾಡಿ ಅಂತರ ಬೆಳೆಯಾಗಿ ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಜೈವಿಕ ಗೊಬ್ಬರ, ಕೊಟ್ಟಿಗೆ ಗೊಬ್ಬರಗಳನ್ನು ಯಥೇಚ್ಚವಾಗಿ ಬಳಸುತ್ತಿದ್ದಾರೆ.
- ಇವರಲ್ಲಿ 4 ಹಿಂಡುವ ದನಗಳು, 4 ಎತ್ತು , 2 ಕೋಣ, ಕುರಿ ಹಾಗೂ 14 ಕೋಳಿಗಳನ್ನು ಸಾಕಿದ್ದಾರೆ. ಕೃಷಿ ಹೊಂಡದಲ್ಲಿ ಮೀನುಸಾಕಣೆಯನ್ನು ಮಾಡುತ್ತಿದ್ದಾರೆ.
- ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದು ಟ್ರಾಕ್ಟರ್, ಮೆಕ್ಕೆಜೋಳದ ಕಾಳು ಬಿಡಿಸುವ ಯಂತ್ರ, ಮೇವು ಕತ್ತರಿಸುವ ಯಂತ್ರ, ಸಿಂಪರಕ, ಕಳೆ ತೆಗೆಯುವ ಯಂತ್ರ ಹೀಗೆ ಹಲವಾರು ಯಂತ್ರಗಳನ್ನು ಬಳಸುತ್ತಿದ್ದಾರೆ.
- ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಿ ಹೆಚ್ಚಿನ ಲಾಭ ಗಳಿಸುತ್ತಿದ್ದಾರೆ.





## ಶ್ರೇಷ್ಠ ಯುವ ಕೃಷಿಕ

**ಹೆಸರು** :ಶ್ರೀನಿವಾಸ ಸುರೇಶ ನಾಗನೂರು
**ಸಾ** : ರಾಮನಗರ
**ತಾಲ್ಲೂಕು** : ಜೋಯಿಡಾ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 9900972378



**ವಿಶೇಷ ಸಾಧನೆಗಳು**

- ಒಟ್ಟು 4 ಎಕರೆ 38 ಗುಂಟೆ ಕ್ಷೇತ್ರದಲ್ಲಿ 3 ಎಕರೆಯಷ್ಟು ನೀರಾವರಿ ಸೌಲಭ್ಯವನ್ನು ಹೊಂದಿದ್ದಾರೆ.
- ತಾಲೂಕಿನಲ್ಲಿಯೇ ರೇಷ್ಮೆ ಕೃಷಿ ಪರಿಚಯಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ರೇಷ್ಮೆ ಇವರ ಪ್ರಮುಖ ಕೃಷಿಯಾಗಿದ್ದು ಗೂಡುಗಳನ್ನು ಶಿರಹಟ್ಟಿ, ಹುಬ್ಬಳ್ಳಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಅಲ್ಲದೇ ಉತ್ತಮ ಗುಣಮಟ್ಟದ ಬೀಜದ ಗೂಡುಗಳನ್ನು ಬೆಂಗಳೂರಿನಲ್ಲಿ ಮಾರುತ್ತಾರೆ.
- ಭತ್ತ ಕೃಷಿಯೊಂದಿಗೆ ಅಡಿಕೆ, ತೆಂಗು, ಕಾಫಿ, ದಾಲ್ಚಿನ್ನಿ, ಲಿಂಬು ಗಿಡಗಳನ್ನು ಬೆಳೆಸಲಾಗಿದೆ.
- ಗೋಡಂಬಿ ಗಿಡಗಳ ಮಧ್ಯ ಔಷಧಿ ಹಾಗೂ ಸುಗಂಧ ದ್ರವ್ಯ ಸಸ್ಯಗಳನ್ನು ಬೆಳೆಸಿದ್ದಾರೆ.
- ಜೇನುಸಾಕಣೆಯಲ್ಲೂ ಕೂಡಾ ಉತ್ಸುಕರಾಗಿದ್ದು, ಸದ್ಯಕ್ಕೆ 5 ಪೆಟ್ಟಿಗೆಗಳನ್ನು ಮನೆಯ ತಾರಸಿ ಮೇಲಿಟ್ಟು ಉತ್ತಮ ಗುಣಮಟ್ಟದ ಜೇನುತುಪ್ಪ ಸಂಗ್ರಹಿಸುತ್ತಿದ್ದಾರೆ.






# ಶ್ರೇಷ್ಠ ಯುವ ಕೃಷಿ ಮಹಿಳೆ



**ಹೆಸರು** : ಸುನೀತಾ ಆನಂದ ಸಾವಂತ
**ಸಾ** : ರಾಮನಗರ – 581453
**ತಾಲ್ಲೂಕು** : ಜೋಯಿಡಾ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 9370651501

**ವಿಶೇಷ ಸಾಧನೆಗಳು**

- 15 ಎಕರೆ ಕ್ಷೇತ್ರ ಹೊಂದಿರುವ ಇವರು ಕೃಷಿ ಬೆಳೆಗಳಾದ ಭತ್ತ, ಅಲಸಂಧಿ, ಹೆಸರು, ಉದ್ದು ಹಾಗೂ ತೋಟಗಾರಿಕೆ ಬೆಳೆಗಳಾದ ಅನಾನಸ್ ಮಾವು ಅಡಿಕೆ, ಚಿಕ್ಕು, ಲಿಂಬು, ಪೇರಲ, ಅನಾನಸ್, ಗೇರು, ತೆಂಗು, ಬಾಳೆ, ಕಾಳುಮೆಣಸು ಅಮಸೋಲ, ಮತ್ತಿತರ ಗಿಡಗಳನ್ನು ವ್ಯವಸ್ಥಿತವಾಗಿ ಸುಧಾರಿತ ತಂತ್ರಜ್ಞಾನಗಳನ್ನು ಉಪಯೋಗಿಸಿ ಬೆಳೆಯುತ್ತಿದ್ದಾರೆ.
- ಮಣ್ಣಿನ ಫಲವತ್ತತೆ ಹಾಗೂ ನೀರು ನಿರ್ವಹಣೆಯ ವಿಶೇಷ ಕಾಳಜಿ ವಹಿಸಿದ್ದು 18 ಅಡಿ ಎತ್ತರಕ್ಕೆ ಕಲ್ಲು ಮಣ್ಣಿನ ಬದುವನ್ನು ನಿರ್ಮಿಸಿದ್ದಾರೆ. ಅಲ್ಲದೇ ಬೃಹತ್ ಮೂರು ಕೃಷಿ ಹೊಂಡವನ್ನು ನಿರ್ಮಿಸಿದ್ದು, ಚಿಕ್ಕ ಪ್ರಮಾಣದಲ್ಲಿ ಮೀನಿನ ಮರಿಗಳನ್ನು ಬಿಡಲಾಗಿದೆ. ಹೊಲದ ಸುತ್ತಲೂ ಗ್ಲಿರಿಸೀಡಿಯಾ, ಹೊಂಗೆ, ಚೊಗಚೆಯ ಜೈವಿಕ ಬದುವನ್ನೂ ಕೂಡ ನಿರ್ಮಿಸಲಾಗಿದೆ.
- ಮಣ್ಣಿನ ಫಲವತ್ತತೆಗೆ ಮುಂಗಾರು ಹಾಗೂ ಹಿಂಗಾರಿನಲ್ಲಿ ಸೆಣಬು, ಕುದುರೆಮಂತೆ, ಚವಳಿಯನ್ನು ಬೆಳೆಸಿ ಮುಗ್ಗು ಹೊಡೆಯುತ್ತಾರೆ.
- ವಿಶೇಷವಾಗಿ ಕೋಳಿ ಸಾಕಾಣಿಕೆಗೆ ಹೆಚ್ಚಿನ ಆದ್ಯತೆ ನೀಡಿದ್ದು 50 ಕೋಳಿಗಳನ್ನು ಹೊಂದಿದ್ದಾರೆ.
- ಸುತ್ತಮುತ್ತಲಿನ ಗ್ರಾಮದ ರೈತರು ಇವರ ಕ್ಷೇತ್ರ ವೀಕ್ಷಣೆ ಮಾಡಿ ನೀರಿನ ಸಂಗ್ರಹಣೆ ಹಾಗೂ ಸರಿಯಾದ ಬಳಕೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಒಟ್ಟಾರೆ ಇವರ ವಾರ್ಷಕ ಆದಾಯ 24,49,000 ರೂ.







## ಶ್ರೇಷ್ಠ ಯುವ ಕೃಷಿ ಮಹಿಳೆ

**ಹೆಸರು** : ವಿದ್ಯಾ ರಮೇಶ ಭಟ್
**ಸಾ** : ಹೊಲನಗದ್ದೆ, (ಜಾಕರಮಠ)
**ತಾಲ್ಲೂಕು** : ಕುಮಟಾ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** :9481732646, 08386220157



**ವಿಶೇಷ ಸಾಧನೆಗಳು**

- ಒಟ್ಟು 3 ಎಕರೆ ಪ್ರಧೇಶ ಅದರಲ್ಲಿ 2.5 ಎಕರೆ ಮಳೆಯಾಶ್ರಿತ 0.5 ಎಕರೆ ನೀರಾವರಿಯಾಗಿದ್ದು, ಭತ್ತ, ಶೇಂಗಾ, ಉದ್ದು, ಬಾಳೆ, ತೆಂಗು, ಕಾಳುಮೆಣಸು, ಅಡಿಕೆ, ಹಲಸು, ಮಾವು, ನಿಂಬೆ, ಚಿಕ್ಕು, ನುಗ್ಗೆ, ಗೇರು ಬೆಳೆದು ಬೆಳೆ ವೈವಿಧ್ಯತೆ ಕಾಪಾಡಿಕೊಂಡಿದ್ದಾರೆ.
- ಭತ್ತ ನಂತರ ಶೇಂಗಾ ಮತ್ತು ಉದ್ದು/ಹೆಸರು ಬೆಳೆ ಪದ್ದತಿ ಅಳವಡಿಸಿಕೊಂಡು ಮಣ್ಣಿನ ಫಲವತ್ತತೆ ಉಳಿಸಿಕೊಂಡಿದ್ದಾರೆ.
- ಅರ್ಧ ಎಕರೆಯಲ್ಲಿ ನೀರಾವರಿ ಅಳವಡಿಸಿ ಬಾಳೆ, ತೆಂಗು, ಕಾಳುಮೆಣಸು, ಅಡಿಕೆ, ಮಾವು, ನಿಂಬೆ, ಚಿಕ್ಕು, ನುಗ್ಗೆ, ಗೇರು ಬೆಳೆದು ಹೆಚ್ಚಿನ ಆದಾಯ ಗಳಿಸುತ್ತಿದ್ದಾರೆ.
- ತೋಟಗಾರಿಕೆ ಬೆಳೆಗಳಿಗೆ ಅನುಕೂಲವಾಗುವಂತೆ ಮತ್ತು ಉಪಕಸುಬಾಗಿ 5 ಜೇನು ಪೆಟ್ಟಿಗೆ ಇಟ್ಟುಕೊಂಡಿದ್ದಾರೆ.
- ಕೃಷಿ ಪೂರಕವಾಗಿ ಉಪಕಸುಬಾಗಿ 5 ಆಕಳು ಇಟ್ಟು 16 ಲೀಟರ್ ಹಾಲು ಹಿಂಡುತ್ತಿದ್ದಾರೆ.
ಅದರ ಸಂಪೂರ್ಣ ಗೊಬ್ಬರವನ್ನು ತಮ್ಮ ಜಮೀನಿಗೆ ಬಳಸಿ ರಾಸಾಯನಿಕ ಗೊಬ್ಬರ ಕಡಿಮೆ ಬಳಸಿ ಖರ್ಚನ್ನು ಕಡಿಮೆ ಮಾಡಿಕೊಂಡಿದ್ದಾರೆ.
- ವಾರ್ಷಿಕ ಆದಾಯ ರೂ.2,84,050 ಇದು ಸಣ್ಣ ಜಮೀನು ಉತ್ತಮ ಕೃಷಿ ಅಧಿಕ ಅವರ ಲಾಭ ಎಂಬಂತೆ ನಿರ್ವಹಿಸುತ್ತಿದ್ದಾರೆ

# ಶ್ರೇಷ್ಠ ಯುವ ಕೃಷಿಕ

**ಹೆಸರು** : ನಾಗರಾಜ ಮೋಹನ ನಾಯ್ಕ
**ಸಾ** : ಕಾಗಾಲ
**ತಾಲ್ಲೂಕು** : ಕುಮಟಾ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 9741374244



**ವಿಶೇಷ ಸಾಧನೆಗಳು**

- ಪುಟ್ಟ ಜಮೀನು ಅಧಿಕ ಲಾಭ
- ಅವರ ಒಟ್ಟು ಪ್ರದೇಶ ಒಂದು ಎಕರೆ 20 ಗುಂಟೆ ಆದರೆ ಎಲ್ಲವೂ ಇದೆ.
- ಸಣ್ಣ ಜಮೀನು ಆದರೂ ಭತ್ತ, ಶೇಂಗಾ, ಉದ್ದು, ಅಡಿಕೆ , ತೆಂಗು, ಬಾಳೆ, ಮಾವು, ಹಲಸು, ಪಪ್ಪಾಯ, ಮಲ್ಲಿಗೆ, ಬೆಳೆಗಳ ಸಮೂಹ.
- ಕೃಷಿಗೆ ಪೂರಕವಾಗಿ ಅಜೋಲ್ಲಾ, ಎರೆಗೊಬ್ಬರ ತಯಾರಿಕೆ, ಹೈನುಗಾರಿಕೆ, ಜೇನು ಕೃಷಿ, ಭಟ್ಕಳ ಮಲ್ಲಿಗೆ ಕೃಷಿ.
- ನಾಲ್ಕು ಆಕಳಿಂದ ಪ್ರತಿದಿನ 15 ಲೀಟರ್ ಹಾಲು ಉತ್ಪಾದನೆ ಮಾಡಿ ರೂ.1,45,000 ಹಣ ಸಂಪಾದನೆ.
- ಮಲ್ಲಿಗೆ ಕೃಷಿ ಮಾಡಿ ಕೇವಲ 25 ಗಿಡದಿಂದ ಪ್ರತಿ ದಿನ 100/– ಸಂಪಾದನೆ ಮಾಡಿ ತಿಂಗಳಿಗೆ 3000/– ರೂ ನಂತೆ ವರ್ಷಕ್ಕೆ ರೂ. 36000/– ಆದಾಯ.
- ಬಿಡುವಿನ ಸಮಯದಲ್ಲಿ ಬಾಡಿಗೆಗಾಗಿ ಟೆಂಪೋ ನಡೆಸುವುದು.
- ಒಟ್ಟಾರೆ ಪುಟ್ಟ 1.2 ಎಕರೆಯಿಂದ ರೂ. 3,03.600 ಆದಾಯ ಗಳಿಸುತ್ತಿದ್ದಾರೆ.

# ಶ್ರೇಷ್ಠ ಯುವ ಕೃಷಿಕ

**ಹೆಸರು** : ವಿನಾಯಕ ಉಮಾಮಹೇಶ್ವರ ಹೆಗಡೆ
**ಸಾ** : ಹೊನ್ನೆಪಾಲ, ಬಾರೆ
**ತಾಲ್ಲೂಕು** : ಯಲ್ಲಾಪುರ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 08419268628, 9482210934

**ವಿಶೇಷ ಸಾಧನೆಗಳು**

- ಒಟ್ಟು 6 ಎಕರೆ ಕ್ಷೇತ್ರವನ್ನು ಹೊಂದಿದ್ದು , ಸಾಂಪ್ರದಾಯಿಕ ಪದ್ಧತಿಯಲ್ಲಿ ಸಿಂಧೂರ ತಳಿ ಭತ್ತದ ಬೇಸಾಯ, ವೈಜ್ಞಾನಿಕ ಪದ್ಧತಿಯಲ್ಲಿ ಅಡಿಕೆ ಆಧಾರಿತ ಕೃಷಿಯನ್ನು ಕೈಗೊಂಡಿದ್ದಾರೆ. ಅಡಿಕೆಯೊಟ್ಟಿಗೆ ತೆಂಗು, ಬಾಳೆ, ಕಾಫಿ, ಲವಂಗ, ಜಾಯಿಕಾಯಿ, ಯಾಲಕ್ಕಿ, ಕಾಳುಮೆಣಸು, ಮತ್ತಿತರ ಬೆಳೆಗಳಿವೆ. ಅಲ್ಲದೇ ಹೈನುಗಾರಿಕೆಗೆ ಅಗತ್ಯವಾದ ಹಸಿರು ಮೇವನ್ನು ಕೂಡಾ ಬೆಳೆಸುತ್ತಿದ್ದಾರೆ
- ಕೃಷಿಯೇತರ ಚಟುವಟುಕೆಗಳಾದ 2 ಆಕಳು ಒಂದು ಎಮ್ಮೆ ಯನ್ನೊಳಗೊಂಡ ಹೈನುಗಾರಿಕೆ ಘಟಕ, 15 ಜೇನು ಗೂಡುಗಳು ಹಾಗೂ ಸಾವಿರಕ್ಕೂ ಹೆಚ್ಚು ಮೀನನ್ನು ಸಾಕಿದ್ದಾರೆ.
- ಕಲ್ಲಿನಿಂದ ಬಸಿಗಾಲುವೆ ನಿರ್ಮಾಣ ಮಾಡಿ ಉತ್ತಮ ನೀರು ನಿರ್ವಹಣೆ ಮಾಡುತ್ತಿದ್ದಾರೆ. ಅಲ್ಲದೇ ಮಣ್ಣಿನ ಸಂರಕ್ಷಣೆಗೂ ಹೆಚ್ಚಿನ ಕಾಳಜಿ ವಹಿಸಿದ್ದಾರೆ.
- ಗೇರು ತೋಟದ ಮಧ್ಯ ತೆಂಗು, ಮಾವು ಇತರೆ ಬೆಳೆ ಬೆಳೆಯುತ್ತಿದ್ದಾರೆ.
- ಇವರ ವಿಶೇಷತೆಯೆಂದರೆ ಅಡಿಕೆ ಹಾಳೆಯ ಪ್ಲೇಟ್ ತಯಾರಿಕಾ ಘಟಕವನ್ನು ಹೊಂದಿದ್ದು, ಉತ್ಪನ್ನಗಳನ್ನು ಹುಬ್ಬಳ್ಳಿ, ಬಾಗಲಕೋಟೆಗೆ ಮಾರಾಟ ಮಾಡುತ್ತಿದ್ದಾರೆ.

## ಶ್ರೇಷ್ಠ ಯುವ ಕೃಷಿ ಮಹಿಳೆ



**ಹೆಸರು** : ಭವಾನಿ ಶಂಕರ ಭಟ್

**ಗ್ರಾಮ** : ಹಿತ್ಲಕಾರಗದ್ದೆ

**ತಾಲ್ಲೂಕು** : ಯಲ್ಲಾಪುರ

**ಜಿಲ್ಲೆ** : ಉತ್ತರ ಕನ್ನಡ

**ಮೊಬೈಲ್ ಸಂಖ್ಯೆ** :08419261826, 8762329411

### ವಿಶೇಷ ಸಾಧನೆಗಳು

- ಇದ್ದ ಒಂದು ಎಕರೆ ಕ್ಷೇತ್ರವನ್ನು ವ್ಯವಸ್ಥಿತವಾಗಿ ವಿಂಗಡಿಸಿ 20 ಗುಂಟೆಯಲ್ಲಿ ಭತ್ತ (ಸಾಲು ನಾಟಿ ಪದ್ಧತಿ) 20 ಗುಂಟೆಯಲ್ಲಿ ಅಡಿಕೆ ಕಾಳುಮೆಣಸು, ತೆಂಗು, ಬಾಳೆ, ಯಾಲಕ್ಕಿ ಮತ್ತಿತರ ಬೆಳೆಗಳನ್ನು ಬೆಳೆಯತ್ತಿದ್ದಾರೆ.
- ಹೈನುಗಾರಿಕೆ ಘಟಕದಲ್ಲಿ 08 ಆಕಳು ಹಾಗೂ 02 ಎಮ್ಮೆ ಗಳಿಂದ ಪ್ರತಿ ತಿಂಗಳು 15 ರಿಂದ 20 ಸಾವಿರ ರೂ ಗಳವರೆಗೆ ನಿವ್ವಳ ಆದಾಯ ಪಡೆಯುತ್ತಿದ್ದಾರೆ. ಕಾಂಪೋಸ್ಟ್ ಗೊಬ್ಬರ ಹಾಗೂ ಎರೆಹುಳು ಗೊಬ್ಬರವನ್ನು ಉತ್ಪಾದನೆ ಮಾಡಿ ತಮ್ಮ ಕ್ಷೇತ್ರಕ್ಕೆ ಬಳಸುತ್ತದ್ದಾರೆ. ಅಲ್ಲದೇ ಅಜೋಲ ಘಟಕವೂ ಇದ್ದು ಬೇಸಿಗೆ ಗಾಲದಲ್ಲಿ ವನಕ್ಕೆ ಉಪಯೋಗಿಸುತ್ತಿದ್ದಾರೆ. ಮೂರು ಜೇನು ಪೆಟ್ಟಿಗೆಗಳಿವೆ.
- ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದಾರೆ.
- ತೋಟದ ಸುತ್ತಲೂ 25 ಕ್ಕೂ ಹೆಚ್ಚು ಗ್ಲಿರಿಸೀಡಿಯಾ ಗಿಡದ ಜೈವಿಕ ಬದು ಇದೆ.
- ವಿಶೇಷವಾಗಿ ಹಲಸಿನ ಖಾದ್ಯಗಳಾದ ಹಲಸಿನ ಚಿಪ್ಸ್, ಹಪ್ಪಳ , ಸಂಡಿಗೆ, ಫೇಡಾ ತಯಾರಿಸಿ ಕದಂಬ ಮಾರುಕಟ್ಟೆ ಸಂಸ್ಥೆಗೆ ಮಾರಾಟ ಮಾಡಿ ಲಾಭ ಗಳಿಸುತ್ತಿದ್ದಾರೆ. ಅಲ್ಲದೇ 20 ಕೆ.ಜಿ ಹಲಸಿನ ಹಣ್ಣಿನ ತಿರುಳನ್ನು ಐಸ್ ಕ್ರೀಮ್ ತಯಾರಿಕಾ ಘಟಕಕ್ಕೂ ನೀಡಿದ್ದಾರೆ. ಒಟ್ಟಾರೆ ಹಲಸಿನಿಂದ ರೂ, 1,50,000 ಆದಾಯ ಗಳಿಸುತ್ತಿದ್ದಾರೆ. ಅಷ್ಟೇ ಅಲ್ಲದೇ ಬೇರು ಹಲಸಿನ ಚಿಪ್ಸ್, ಹಪ್ಪಳ ಕೂಡಾ ತಯಾರಿಸಲಾಗುತ್ತಿದೆ.
- ಹಲಸಿನ ಮೌಲ್ಯವರ್ಧನೆ ಕುರಿತು ಹಲವಾರು ತರಭೇತಿ ಕಾರ್ಯಕ್ರಮವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧೀ ಯೋಜನೆಯ ಸ್ವಸಹಾಯ ಗುಂಪುಗಳಿಗೆ ನೀಡಲಾಗುತ್ತಿದೆ.





## ಶ್ರೇಷ್ಠ ಯುವ ಕೃಷಿಕ



**ಹೆಸರು** : ಪ್ರಶಾಂತ ಬಸವರಾಜ ಗೌಡ್ರು
**ಸಾ** : ಕುಣಜಿ, ಕೊಂಡ್ಲಿ
**ತಾಲ್ಲೂಕು** : ಸಿದ್ದಾಪುರ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 9663270966

**ವಿಶೇಷ ಸಾಧನೆಗಳು**

- ಇವರು 7 ಎಕರೆ ನೀರಾವರಿ ಪ್ರಧೇಶ ಹಾಗೂ 5 ಎಕರೆ ಓಣ ಬೇಸಾಯ ಕ್ಷೇತ್ರವನ್ನು ಹೊಂದಿದ್ದಾರೆ. ಪ್ರಮುಖ ಬೆಳೆಗಳು ಭತ್ತ, ಅಡಿಕೆ, ಕಾಳುಮೆಣಸು, ಜಾಯಿಕಾಯಿ, ಲವಂಗ, ಬಾಳೆ, ಇತ್ಯಾದಿ
- ಕೃಷಿಯೇತರ ಚಟುವಟಿಕೆಯಲ್ಲೂ ತಮ್ಮನ್ನು ತೊಡಗಿಸಿ ಕೊಂಡಿದ್ದು, 05 ಹಿಂಡುವ ದನಗಳನ್ನೊಳಗೊಂಡ ಹೈನುಗಾರಿಕೆ ಘಟಕ, 5 ಜೇನು ಪೆಟ್ಟಿಗೆ ಹಾಗೂ ಕೃಷಿ ಹೊಂಡದಲ್ಲಿ 1000 ಮೀನಿನ ಮರಿಗಳನ್ನು ಸಾಕುತ್ತಿದ್ದಾರೆ.
- ಅರಣ್ಯ ಮರಗಳಾದ ಸಾಗುವಾನಿ, ಸಿಲ್ವರ್ ಓಕ್, ಕೋಕಂ, ಮತ್ತಿತರ ಮರಗಳನ್ನೂ ಸಹ ಹೊಂದಿದ್ದಾರೆ.
- ಮಣ್ಣು ಮತ್ತು ನೀರು ಸಂರಕ್ಷಣಾ ವಿಧಾನಗಳನ್ನು ಸಮರ್ಪಕವಾಗಿ ಬಳಸಿದ್ದಾರೆ.
- ತಾಲ್ಲೂಕು ಮಟ್ಟದ ಭತ್ತದ ಬೆಳೆ ಸ್ಫರ್ಧೆಯಲ್ಲಿ ದ್ವಿತಿಯ ಸ್ಥಾನವನ್ನು ಪಡೆದಿದ್ದಾರೆ.
- ಜಿಲ್ಲೆಗೆ ಇತ್ತೀಚಿಗೆ ಪರಿಚಯಿಸಲ್ಪಟ್ಟ ಅರಗು ಕೃಷಿಯನ್ನೂ ಸ್ವಲ್ಪ ಮಟ್ಟಿಗೆ ಮಾಡುತ್ತಿದ್ದಾರೆ.





**ಶ್ರೇಷ್ಠ ಯುವ ಕೃಷಿ ಮಹಿಳೆ**



**ಹೆಸರು** : ರೂಪಾ ಪ್ರವೀಣ ಹೆಗಡೆ
**ಸಾ** : ಹೊಸಗದ್ದೆ
**ತಾಲ್ಲೂಕು** : ಸಿದ್ಧಾಪುರ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 08389–24823, 9448821294

**ವಿಶೇಷ ಸಾಧನೆಗಳು**

- ಅಡಿಕೆ ಆಧಾರಿತ ಕೃಷಿ ಬೆಳೆಗಳಾದ ಜಾಯಿಕಾಯಿ, ಕಾಳುಮೆಣಸು, ಕೋಕೊ , ಬಾಳೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ಎರೆಹುಳು ಗೊಬ್ಬರ ಹಾಗೂ ಜೀವ ರಸಸಾರ ಘಟಕವನ್ನು ಹೊಂದಿದ್ದು ಬೆಳೆಗಳಿಗೆ ಸಂಪೂರ್ಣವಾಗಿ ಬಳಸಲಾಗುತ್ತಿದೆ.
- ವ್ಯವಸ್ಥಿತವಾಗಿ ಬಸಿಗಾಲುವೆಗಳ ನಿರ್ಮಾಣ ಮಾಡಿದ್ದರಿಂದ ಅಡಿಕೆ ಬೆಳೆ ಕೀಟ ರೋಗ ಮುಕ್ತವಾಗಿದೆ. ಅಲ್ಲದೇ ನೀರಿನ ನಿರ್ವಹಣೆ ಚೆನ್ನಾಗಿದೆ. ಕೃಷಿ ಹೊಂಡ ಕೂಡಾ ಇದೆ.
- ತೋಟದ ಸುತ್ತಲೂ ಗ್ಲಿರಿಸಿಡಿಯಾ ಬೇಲಿಯನ್ನು ನಿರ್ಮಾಣ ಮಾಡಿದ್ದಾರೆ.
- ಇವರ ಪತಿಯೂ ಕೃಷಿ ಕಾರ್ಯಕ್ಕೆ ಕೈ ಜೋಡಿಸಿದ್ದು, ಅಡಿಕೆ ಚಾಲಿ ಸುಲಿಯುವ ಯಂತ್ರ, ತಯಾರಿಸುತ್ತಿದ್ದಾರೆ. ಸ್ಲರಿ ಎತ್ತುವ ಕೈ ಪಂಪನ್ನು ಕೂಡಾ ತಯಾರಿಸಿ ಮಾರಾಟ ಮಾಡಿದ್ದಾರೆ.





## ಶ್ರೇಷ್ಠ ಯುವ ಕೃಷಿಕ



**ಹೆಸರು** : ನಾಗೇಂದ್ರ ಶರದ ನಾಯ್ಕ
**ಸಾ** : ಗುಂಡಬಾಳ
**ತಾಲ್ಲೂಕು** : ಅಂಕೋಲಾ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 89707937998

**ವಿಶೇಷ ಸಾಧನೆಗಳು**

- ಇವರು 13 ಎಕರೆ ಭೂಮಿಯನ್ನು ಹೊಂದಿದ್ದು ಹನಿ ನೀರಾವರಿ ಹಾಗೂ ಹರಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ.
- ಇವರು ಭತ್ತ, ಶೇಂಗಾ, ಬಹು ಬೆಳೆಗಳಾದ ಅಡಿಕೆ, ತೆಂಗು, ಬಾಳೆ, ಜಾಯಿಕಾಯಿ, ಅಂತರ ಬೆಳೆಗಳಾದ ಮೆಣಸಿನಕಾಯಿ, ಸಾಗವಾನಿ, ಶ್ರೀಗಂಧ ಮತ್ತು ಮತ್ತಿತರ ಮಿಶ್ರ ಬೆಳೆಗಳಾದ ದಾಲ್ಚಿನ್ನಿ ರಾಮಪತ್ರಿ, ಗೇರು, ಮುರುಗಲು, ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ತಮ್ಮ ಕೃಷಿಗೆ ಬೇಕಾಗುವ ಗೊಬ್ಬರಗಳನ್ನು ಸ್ವತಃ ತಾವೇ ಸಾವಯವ ಗೊಬ್ಬರಗಳನ್ನು ತಯಾರಿಸಿ ಬಳಕೆ ಮಾಡುತ್ತಿದ್ದಾರೆ.
- ಜೈವಿಕ ಗೊಬ್ಬರ ಘಟಕದ ನಿರ್ಮಾಣ ಮಾಡಿದ್ದಾರೆ. ತಮ್ಮ ಅಗತ್ಯತೆಗೆ ಅನುಗುಣವಾಗಿ ಘಟಕದ ನಿರ್ವಹಣೆಯನ್ನು ಮಾಡುತ್ತಿದ್ದಾರೆ.
- ಕೃಷಿಯೊಟ್ಟಿಗೆ ಉಪಕಸುಬಗಳಾದ ಹೈನುಗಾರಿಕೆ, ಮೀನುಗಾರಿಕೆ, ಜೇನು ಸಾಕಾಣಿಕೆಯಿಂದಲೂ ಸಹ ಅಧಿಕ ಲಾಭವನ್ನು ಪಡೆಯುತ್ತಿದ್ದಾರೆ.
- ಬಾಡಿಗೆ ಆಧಾರಿತ ಕೃಷಿ ಯಂತ್ರೋಪಕರಣಗಳನ್ನು ಬಳಸುತ್ತಿದ್ದಾರೆ.
- ಕೃಷಿಯಲ್ಲಿ ಅಧಿಕ ಸಾಧನೆಗ್ಯೆಯುವ ಹಾದಿಯಲ್ಲಿ ಸಾಗುತ್ತಿದ್ದಾರೆ, ಹಾಗೂ ಇತರರಿಗೂ ಮಾದರಿಯಾಗಿದ್ದಾರೆ.

## ಶ್ರೇಷ್ಠ ಯುವ ಕೃಷಿ ಮಹಿಳೆ



ಹೆಸರು: ನಿಶ್ಚಿತ್ ರಾಮದಾಸ್ ನಾಯಕ

ಸಾ: ಅಗಸೂರು

ತಾ: ಅಂಕೋಲಾ

ಜಿ: ಉತ್ತರಕನ್ನಡ

ದೂ: 8762573069

**ವಿಶೇಷ ಸಾಧನೆಗಳು**

- ಇವರು 4 ಎಕರೆ ಜಮೀನು ಹೊಂದಿದ್ದು ಅದು ಮಳೆ ಆಶ್ರಿತ/ಒಣ ಬೇಸಾಯ ಪದ್ದಿತಿಯನ್ನು ಅಳವಡಿಸಿಕೊಂಡಿದ್ದು, 3 ಆಕಳುಗಳನ್ನು 3 ಎಮ್ಮೆ ಸಾಕಿರುತ್ತಾರೆ. ಜೊತೆಗೆ ಕೋಳಿ ಸಾಕಾಣಿಕೆಯನ್ನೂ ಸಹ ಮಾಡಿದ್ದಾರೆ.
- ಭತ್ತ ಹಾಗೂ ಶೇಂಗಾವನ್ನು ಬೆಳೆಯುತ್ತಿದ್ದಾರೆ.
- ಇವರ ಮುಖ್ಯ ಚಟುವಟಿಕೆಗಳೆಂದರೆ ಕೃಷಿ–ತೋಟಗಾರಿಕೆ, ಹೈನು ಮತ್ತು ಕೃಷಿ ಅರಣ್ಯ ಪದ್ದತಿಗಳಾಗಿವೆ.
- ಭೂಮಿಯ ಫಲವತ್ತತೆಯನ್ನು ಕಾಪಾಡಲು ಕೊಟ್ಟಿಗೆ ಗೊಬ್ಬರವನ್ನು ಉಪಯೋಗಿಸುತ್ತಾರೆ.
- ಇವರ ಆದಾಯವು ಎಲ್ಲಾ ಕಸಬುಗಳಿಂದ / ಉಪಕಸಬುಗಳಿಂದ ವಾರ್ಷಿಕ ಆದಾಯವು 90,000 ರೂ ಆಗಿರುತ್ತದೆ.

**ಶ್ರೇಷ್ಠ ಯುವ ಕೃಷಿಕ**



**ಹೆಸರು** : ಕುಪ್ಪಯ್ಯ ತಮ್ಮಯ್ಯ ಗೊಂಡ
**ಗ್ರಾಮ** : ಹಾಡಲವಳ್ಳಿ
**ತಾಲ್ಲೂಕು** : ಭಟ್ಕಳ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 9482184110

**ವಿಶೇಷ ಸಾಧನೆಗಳು**

- ಇವರು 5 ಎಕರೆ ಭೂಮಿಯನ್ನು ಹೊಂದಿದ್ದು. ಹರಿ ನೀರಾವರಿ ಪದ್ಧತಿಯನ್ನು ಅಳವಡಿಸಿ ನೀರಿನ ಸಮರ್ಪಕ ನಿಯಂತ್ರಣ ಮಾಡಿ ತಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಂಡಿದ್ದಾರೆ.
- ಇವರು ಏಕ ಬೆಳೆಗಳಾದ ಭತ್ತ, ಬಹು ಬೆಳೆ, ಅಡಿಕೆ, ತೆಂಗು, ಬಾಳೆ ಅಂತರ ಬೆಳೆಗಳಾಗಿ ಜಾಯಿಕಾಯಿ, ವೀಳ್ಯೆದೆಲೆ, ಮೆಣಸಿನ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ಅದರ ಜೊತೆಗೆ ರೇಷ್ಮೆ ಸಾಕಾಣಿಕೆಯನ್ನು, ಮೀನುಗಾರಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಾಗೂ ಇತರ ತರಕಾರಿ ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.
- ಕೃಷಿಗೆ ಬೇಕಾಗುವ ಗೊಬ್ಬರಗಳನ್ನು ತಾವೇ ಸ್ವತಃ ತಮ್ಮ ಹೊಲದಲ್ಲಿ ತಯಾರಿಸಿಕೊಳ್ಳುತ್ತಿದ್ದಾರೆ. ಇದರಿಂದ ಸಾವಯುವ ಕೃಷಿ ಪದ್ಧತಿಯನ್ನು ಅನುಸರಿಸಿ ಇತರರಿಗೂ ಇದರ ಮಹತ್ವವನ್ನೂ ತಿಳಿಸುವಲ್ಲಿ ಯಶಸ್ವಿಯಾಗಿದ್ದಾರೆ.
- ಇವರ ಕುಟುಂಬದವರೆಲ್ಲಾ ಒಗ್ಗೂಡಿ ಮಾಡುವುದರಿಂದ ಸಮಯದ ಉಳಿತಾಯ ಮತ್ತು ಕೂಲಿಯ ಉಳಿತಾಯ ಮಾಡುವುದರ ಜೊತೆಗೆ ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.
- ಕೃಷಿಯ ಮಹತ್ವವನ್ನು ಹಾಗೂ ಉತ್ಪನ್ನಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯವನ್ನು ಮಾಡುತ್ತಿದ್ದಾರೆ.

## ಶ್ರೇಷ್ಠ ಯುವ ಕೃಷಿ ಮಹಿಳೆ



**ಹೆಸರು** : ಮೇಘಾ ನಾರಾಯಣ ಭಟ್
**ಸಾ** : ಕೊಪ್ಪ – ಗೋಳಿಕುಂಬ್ರಿ
**ತಾಲ್ಲೂಕು** : ಭಟ್ಕಳ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 9448741883

**ವಿಶೇಷ ಸಾಧನೆಗಳು**

- ಇವರು 3.20 ಎಕರೆಗಳನ್ನು ಹೊಂದಿದ್ದು, ಹನಿ ಮತ್ತು ಸಿಂಚನ ನೀರಾವರಿ ಮೂಲಕ ಬೇಸಾಯವನ್ನು ಅನುಸರಿಸುತ್ತಿದ್ದಾರೆ.
- ಏಕಬೆಳೆ, ಬಹುಬೆಳೆ ಅಂತರ ಬೆಳೆಗಳ ಜೊತೆಗೆ ತೋಟಗಾರಿಕಾ ಬೆಳೆಗಳಾದ ಅಡಿಕೆ, ತೆಂಗು, ಕೋಕೊ, ಮಾವು, ರಬ್ಬರ್, ವೀಳ್ಯೆದೆಲೆ, ಜಾಯಿಕಾಯಿ, ಗೇರು, ಏಲಕ್ಕಿ, ಬೆಳೆಗಳನ್ನು ಬೆಳೆದಿದ್ದಾರೆ.
  ಜೊತೆಗೆ ಜೇನು ಸಾಕಾಣಿಕೆಯನ್ನು ಮಾಡುತ್ತಿದ್ದಾರೆ.
- ಮಣ್ಣಿನ ಫಲವತ್ತತೆಗಾಗಿ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರವನ್ನು ಬಳಸುತ್ತಿದ್ದಾರೆ.
- ಹೀಗೆ ಸಾವಯುವ ಗೊಬ್ಬರಗಳನ್ನು ಹಾಗೂ ಕೀಟನಾಶಕಗಳನ್ನು ಬಳಸಿ ರೈತರಿಗೆ ಮಾದರಿಯಾಗುವಂತೆ ವ್ಯವಸಾಯ ಪದ್ದತಿಯನ್ನು ಅನುಸರಿಸುತ್ತಿದ್ದಾರೆ.
- ಇವರು ಬಿ.ಕಾಮ್ ಪಧವಿಧರರಾದರು, ಕೃಷಿಯಲ್ಲಿ ಆಸಕ್ತಿ ತೋರಿಸಿ ಇನ್ನಿತರ ಯುವಕ/ಯುವತಿಯನ್ನು ಕೃಷಿಯೆಡೆಗೆ ಆಸಕ್ತಿ ತೋರುವಂತೆ ಗಮನ ಸೆಳೆದಿದ್ದಾರೆ.

## ಶ್ರೇಷ್ಠ ಯುವ ಕೃಷಿ ಮಹಿಳೆ



**ಹೆಸರು** : ಕೃಪಾ ಮಂಜುನಾಥ ಭಟ್
**ಸಾ** : ಸರಳಗಿ
**ತಾಲ್ಲೂಕು** : ಹೊನ್ನಾವರ
**ಜಿಲ್ಲೆ** : ಉತ್ತರ ಕನ್ನಡ
**ಮೊಬೈಲ್ ಸಂಖ್ಯೆ** : 08387268, 9482189945

**ವಿಶೇಷ ಸಾಧನೆಗಳು**

- ಇವರು ಒಟ್ಟು 7.22 ಎಕರೆ ಕೃಷಿ ಭೂಮಿಯನ್ನು ಹೊಂದಿರುತ್ತಾರೆ. ಅದರಲ್ಲಿ 1.10 ಎಕರೆ ಪ್ರದೇಶ ಒಣ ಬೇಸಾಯ ಪದ್ಧತಿ ಇನ್ನುಳಿದ 6.22 ಎಕರೆ ಪ್ರದೇಶವು ನೀರಾವರಿ ಪ್ರದೇಶ ಹೊಂದಿದ್ದು ಜೊತೆಗೆ ಜಾನುವಾರು ಸಾಕಾಣಿಕೆಯನ್ನು ಮಾಡುತ್ತಿದ್ದು, 5 ಹಿಂಡುವ ದನಗಳು ಹೊಂದಿದ್ದಾರೆ.
- ಇವರಿಗೆ ಮಣ್ಣಿನ ಹಾಗೂ ನೀರಿನ ಸಂರಕ್ಷಣಾ ಕುರಿತು ಜ್ಞಾನವನ್ನು ಹೊಂದಿರುತ್ತಾರೆ. ಇವರು ನೀರು ನಿರ್ವಹಣೆ ಕ್ರಮಗಳನ್ನು ಅನುಸರಿಸಿದ್ದಾರೆ. ಜೈವಿಕ ಅನಿಲ ಘಟಕವನ್ನು ಹೊಂದಿದ್ದಾರೆ.
- ಇವರು ಬಹು ಬೆಳೆ ಪದ್ದತಿ ಹಾಗೂ ಅಂತರ ಬೆಳೆ, ಮಿಶ್ರ ಬೆಳೆಗಳೊಡನೆ ಎಲೆ, ಅಡಿಕೆ, ಬಾಳೆ, ಕೋಕೊ, ಬೆಳೆಗಳನ್ನು ಬೆಳೆದಿದ್ದು ಮತ್ತು ಕೃಷಿ ಅರಣ್ಯ ಪದ್ಧತಿಯನ್ನು ಅಳವಡಿಸಿಕೊಂಡು ಬೆಟ್ಟದಲ್ಲಿ ವಿವಿಧ ಹಸಿರೆಲೆ ಗೊಬ್ಬರದ ಗಿಡಗಳನ್ನು ಬೆಳೆಸುತ್ತಿದ್ದು ಈ ಎಲ್ಲಾ ಉಪಕಸಬುಗಳಿಂದ ರೂ. 6,80,000/– ವಾರ್ಷಿಕ ಆದಾಯ ಪಡೆದುಕೊಂಡಿರುತ್ತಾರೆ.

**ಶ್ರೇಷ್ಠ ಯುವ ಕೃಷಿಕ**



**ಹೆಸರು** : ರಾಮಕೃಷ್ಣ ತಿಮ್ಮಪ್ಪ ಗೌಡ

**ಸಾ** : ಮಂಕಿ

**ತಾಲ್ಲೂಕು** : ಹೊನ್ನಾವರ

**ಜಿಲ್ಲೆ** : ಉತ್ತರ ಕನ್ನಡ

**ಮೊಬೈಲ್ ಸಂಖ್ಯೆ** : 9483613503

**ವಿಶೇಷ ಸಾಧನೆಗಳು**

- ಇವರಿಗೆ ಒಟ್ಟು 2.50 ಎಕರೆ ಜಮೀನು ಇದ್ದು, ಅದರಲ್ಲಿ 1 ಎಕರೆ ಪ್ರದೇಶದಲ್ಲಿ ಒಣ ಬೇಸಾಯ ಮಾಡುತ್ತಿದ್ದು, ಜೊತೆಗೆ ಪಶು ಸಂಗೋಪನೆಯನ್ನು ಹೊಂದಿದ್ದು ಅದರಲ್ಲಿ 1 ಸ್ವದೇಶಿಯ ತಳಿಯ ಆಕಳು ಮತ್ತು ಎಮ್ಮೆಯನ್ನು ಸಾಕಿದ್ದಾರೆ. ಇದರ ಜೊತೆಗೆ ಕೋಳಿ ಸಾಕಾಣಿಕೆಯನ್ನು ಮಾಡುತ್ತಿದ್ದಾರೆ.
- ತಮ್ಮ ಹಿಡುವಳಿಯಲ್ಲಿ ಬದು ನಿರ್ಮಿಸುವುದು ಮತ್ತು ಬದು ಹಾಕುವ ವಿಧಾನಗಳನ್ನು ಅಳವಡಿಸಿಕೊಂಡಿದ್ದು ಜೊತೆಗೆ ಇಂಗು ಗುಂಡಿ ನಿರ್ಮಿಸಿ ಮಳೆ ನೀರನ್ನು ಸಂಗ್ರಹಿಸಿದ್ದಾರೆ.
- ಕೃಷಿ ನೀರಿನ ನಿರ್ವಹಣೆಯಲ್ಲಿ ಮುಖ್ಯವಾಗಿ ಹನಿ ನೀರಾವರಿ ಮತ್ತು ಬಸಿಗಾಲುವೆಗಳನ್ನು ನಿರ್ಮಿಸಿದ್ದಾರೆ.
- ಬೆಳೆಗಳಲ್ಲಿ ಏಕಬೆಳೆ ಹಾಗೂ ಮಿಶ್ರ ಬೆಳೆಗಳನ್ನು ಪ್ರಮುಖ ಬೆಳೆಯಾಗಿ ಬೆಳೆಯುತ್ತಿದ್ದು, ಇವರ ಜಮೀನಿನಲ್ಲಿ ಮುಖ್ಯವಾಗಿ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಜೊತೆಗೆ ಕೃಷಿ ಅರಣ್ಯ ಪದ್ಧತಿಯಲ್ಲಿ ಅಳವಡಿಸಿಕೊಂಡಿದ್ದಾರೆ.
- ಜಮೀನಿನಲ್ಲಿ ಇವರು ಕೊಟ್ಟಿಗೆ ಗೊಬ್ಬರ ಮತ್ತು ಹಸಿರೆಲೆ ಗೊಬ್ಬರವನ್ನು ಬಳಸಿ ಭೂಮಿಯ ಫಲವತ್ತತೆಯನ್ನು ಕಾಪಾಡಿ ಕೊಂಡಿದ್ದಾರೆ. ಜೊತೆಗೆ ಪಿ.ಎಸ್.ಬಿ ಯನ್ನು ಬಳಸಿ ಉತ್ಪಾದಕತೆಯನ್ನು ಹೆಚ್ಚಿಸಿದ್ದಾರೆ. ಹಾಗೆ ಜೈವಿಕ ಘಟಕವನ್ನು ನಿರ್ಮಿಸಿದ್ದಾರೆ.
- ಯಂತ್ರೋಪಕರಣಗಳಲ್ಲಿ ಮುಖ್ಯವಾಗಿ ಸಿಂಪರಕಗಳು, ಕೊಯ್ಲು ಮತ್ತು ರಾಶಿ ಮಾಡುವ ಯಂತ್ರಗಳು, ಮೇವು ಕತ್ತರಿಸುವ ಯಂತ್ರ ಹಾಗೂ ಟಿಲ್ಲರ್ಸಗಳನ್ನು ಬಳಕೆ ಮಾಡುತ್ತಿದ್ದಾರೆ.
- ಇವರ ವಾರ್ಷಿಕ ಆದಾಯ ರೂ. 4,20,000/- ಆಗಿದ್ದು, ವಿವಿಧ ಉಪಕಸಬುಗಳಿಂದ ಕೃಷಿ, ತೋಟಗಾರಿಕೆ ಮತ್ತು ಹೈನುಗಾರಿಕೆಯಿಂದ ಪಡೆದಿರುತ್ತಾರೆ.

## ಶ್ರೇಷ್ಠ ಯುವ ಕೃಷಿ ಮಹಿಳೆ



ಹೆಸರು: ಗೀತಾ ಸುರೇಶ ಗೌಡ

ಸಾ : ಮಂಜಿಲ್

ತಾ: ಕಾರವಾರ

ಜಿ: ಉತ್ತರಕನ್ನಡ

ಮೊ ನಂ: 9482101378

**ವಿಶೇಷ ಸಾಧನೆಗಳು :**

- ಒಟ್ಟು 2 ಎಕರೆ ಕ್ಷೇತ್ರದಲ್ಲಿ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳನ್ನು ಬೆಳೆದಿದ್ದಾರೆ. ಭತ್ತವನ್ನು ಸಾಲು ನಾಟಿ ಹಾಗೂ ಶ್ರೀ ಪದ್ಧತಿಯಿಂದ ಬೆಳೆದಿದ್ದಾರೆ. ಅಲ್ಲದೆ ತೋಟಗಾರಿಕಾ ಬೆಳೆಗಳಾದ ಮಾವು, ತೆಂಗು ಹಾಗೂ ಅಡಿಕೆಗಳನ್ನು ಬೆಳೆದಿದ್ದು ಬೆಳೆ ವೈವಿಧ್ಯತೆ ಕಾಪಾಡಿದ್ದಾರೆ.
- ಪ್ರಾಣಿ ಸಂಪನ್ಮೂಲಗಳಾದ 3 ಆಕಳು ಹಾಗೂ 25 ಕೋಳಿಗಳನ್ನು ಸಾಕಿದ್ದಾರೆ ಅಲ್ಲದೆ ಜೇನು ಕೃಷಿಯನ್ನು ಮಾಡುತ್ತಾರೆ.
- ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಲು ಹಸಿರೆಲೆ ಗೊಬ್ಬರ ಎರೆಹುಳು ಗೊಬ್ಬರ ರೈಜೋಬಿಯಂ ಉಪಯೋಗಿಸುತ್ತಾರೆ.
- ಸಾವಯವ ಗೊಬ್ಬರವನ್ನು ಹೆಚ್ಚಾಗಿ ಬೆಳೆಸುವದು ಹಾಗೂ ಸಾಲು ನಾಟಿ ಪದ್ದತಿಯನ್ನು ಅನುಸರಿಸಿವುದು ಹಾಗೂ ಸಸಿ ಮಾಡುವ ಪ್ರದೇಶಕ್ಕೆ ಭತ್ತದ ಹೊಟ್ಟನ್ನು ಬೆರೆಸುವುದು ಇವರ ಸಾಧನೆಯಾಗಿದೆ.
- ಭತ್ತದಿಂದ 42 ಕ್ವಿಂಟಲ್ ಇಳುವರಿ ತೆಗೆದು 54600/- ವಾರ್ಷಿಕ ಆದಾಯ ಹೊಂದಿದ್ದು ಜೇನು ಕೃಷಿಯಿಂದ 6000/- ಹಾಗೂ ಪ್ರಾಣಿ ಸಂಪನ್ಮೂಲಗಳಿಂದ 14000/- ವಾರ್ಷಿಕ ಆದಾಯ ಹೊಂದಿದ್ದಾರೆ.

## ಶ್ರೇಷ್ಠ ಯುವ ಕೃಷಿ ಮಹಿಳೆ

ಹೆಸರು : ಮಂಜುಳಾ ಸದಾಶಿವ ಪಾಲೇಕರ

ಸಾ : ನ್ಯಾಸರ್ಗಿ

ತಾ: ಮುಂಡಗೋಡ

ಜಿ: ಉತ್ತರಕನ್ನಡ

ಮೊ ನಂ: 9880495295

**ವಿಶೇಷ ಸಾಧನೆಗಳು:**

- ಒಟ್ಟು ಆರು ಎಕರೆ ಪ್ರದೇಶದಲ್ಲಿ 3 ಎಕರೆ ಒಣ ಬೇಸಾಯ ಹಾಗೂ 3 ಎಕರೆ ನೀರಾವರಿ ಪ್ರದೇಶ ಹೊಂದಿದ್ದಾರೆ.
- ಪ್ರಾಣಿ ಸಂಪನ್ಮೂಲಗಳಾಗಿ 3 ಆಕಳು ಹಾಗೂ 2 ಎತ್ತುಗಳನ್ನು ಹೊಂದಿರುತ್ತಾರೆ, ಇವರು ಏಕ ಬೆಳೆಯಾಗಿ ಭತ್ತ ಹಾಗೂ ಅಂತರ ಬೆಳೆಯಾಗಿ ಬಾಳೆ, ಅಡಿಕೆ ಹೊಂದಿದ್ದಾರೆ.
- ಇವರು ಸಾವಯವ ಕೃಷಿ ಪದ್ದತಿ ಹಾಗೂ ಸಮಗ್ರ ಕೃಷಿ ಪದ್ಧತಿ  ಅನುಸರಿಸುತ್ತಾರೆ.
- ಇವರು ಆರು ಎಕರೆ ಪ್ರದೇಶದಿಂದ ಒಟ್ಟು 3,30,000/– ವಾರ್ಷಿಕ ಆದಾಯ ಹೊಂದಿದ್ದಾರೆ.

**ಶ್ರೇಷ್ಠ ಯುವ ಕೃಷಿಕ**



ಹೆಸರು : ರಮೇಶ ಮಧುಸೂಧನ ನಾಯಕ
ಸಾ : ಬೋರನಗುಡ್ಡ
ತಾ: ಮುಂಡಗೋಡ
ಜಿ: ಉತ್ತರಕನ್ನಡ
ಮೊ ನಂ: 9449360118

**ವಿಶೇಷ ಸಾಧನೆಗಳು:**

- ಒಟ್ಟು 7.15 ಎಕರೆ ಕ್ಷೇತ್ರವನ್ನು ಹೊಂದಿದ್ದು 4.15 ಎಕರೆ ಒಣ ಬೇಸಾಯ ಹಾಗೂ 3.0 ಎಕರೆ ನೀರಾವರಿ ಹೊಂದಿದ್ದಾರ್ರೆ.
- ಹೈನುಗಾರಿಕೆ ಹೊಂದಿರುವ ಇವರು 3 ಆಕಳು ಹಾಗೂ 1 ಎಮ್ಮೆಯನ್ನು ಸಾಕಿದ್ದಾರೆ.
- ಇವರು ಏಕಬೆಳೆಯಾಗಿ ಭತ್ತ ಹಾಗೂ ಬಹುಬೆಳೆಯಾಗಿ ಅಡಿಕೆ, ಬಾಳೆ ಹಾಗೂ ಮಿಶ್ರ ಬೆಳೆಯಾಗಿ ಏಲಕ್ಕಿ, ಕೊಕೋ, ಕಾಳುಮೆಣಸನ್ನು ಹೊಂದಿದ್ದಾರೆ.
- ಮಣ್ಣಿನ ಫಲವತ್ತತೆಗೆ ಕೊಟ್ಟಿಗೆ ಗೊಬ್ಬರ ಹಾಗೂ ರೈಜೋಬಿಯಂ ಬಳಸುತ್ತಾರೆ.
- ಇವರು ಬೀಜ ಬಿತ್ತಲು, ಕಳೆ ತೆಗೆಯಲು ಹಾಗೂ ಮೇವು ಕತ್ತರಿಸಲು ಯಂತ್ರಗಳನ್ನು ಬಳಸಿರುತ್ತಾರೆ.
- ಕೃಷಿಯಿಂದ 45000/- ವಾರ್ಷಿಕ ಆದಾಯ ತೋಟಗಾರಿಕೆಯಿಂದ 3,00,000 ವಾರ್ಷಿಕ ಆದಾಯ ಪಡೆಯುತ್ತಾರೆ.